

ಎಡದಿಂದ ಬಲಕ್ಕೆ:

1. ಅಮ್ಮನ ಪ್ರೀತಿ ಮಮತೆಗಳಿಗೆ ಹೋಲಿಕೆಯೇ ಇಲ್ಲ 4
3. ಅಭ್ಯಾಸವನ್ನು ಮಾಡಲು ನಿರ್ದಿಷ್ಟ ಕಾಲಾಂತರ ಇದೆ 3
4. ಆ ಊರಿನ ಜನರನ್ನೆಲ್ಲ ಕಾಡಿಸಿದ್ದು ರೋಗದ ಜೊತೆಗಾರ 3
6. ಆಹ್ವಾನಿತರನ್ನು ಕರೆತರುವಾಗ ಭಾರೀ ಆಕಸ್ಮಿಕವೇ ಸಂಭವಿಸಿತು 4
8. ಕಂತೆಗಳಿಗೆ ದಾರ ಕಟ್ಟುವವನೂ ಬ್ಯಾಂಕಿನಲ್ಲಿ ಹಣದ ಲೆಕ್ಕ ಇರಿಸಿದ್ದಾನೆ 4
10. ಸಹೋದರಿಯ ಕಾರ್ಯಗಳಿಗೆ ಈ ಸಾಧನ ನೆರವು ನೀಡಬಲ್ಲದು 4
12. ರಂಗ ಮಂಟಪಕ್ಕೇ ನುಗ್ಗಿತು ನೋಡಿ ಕುದುರೆ! 4
16. ಕೊಟ್ಟ ಹಣವನ್ನು ಹಿಂಪಡೆಯುವುದು ಸುಲಭವಲ್ಲ 3
17. ಲಟಾಪಟಿಯಲ್ಲಿ ಏಟು ತಿಂದವನ ಹಣೆ ನೋಡಿ 3
18. ತಮ್ಮನ ಕೈ ಕೆಲಸಗಳೆಲ್ಲ ಹೀಗೇಕೌಶಲ್ಯ ಪೂರ್ಣ 4

ಮೇಲಿಂದ ಕೆಳಕ್ಕೆ:

1. ಅಧ್ಯಯನಕ್ಕೆ ನಿಯೋಜಿಸಿರುವ ಪಥ್ಯ ಹೆಚ್ಚಾಯಿತು 3
2. ಮೂರ್ಖರ ಸ್ಥಿತಿ ಕಂಡರೆ ಕರುಣೆ ಹುಟ್ಟುತ್ತದೆ 3
3. ಅಲ್ಲಿನ ಆಹಾರ ಪದ್ಧತಿಯ ವಿವರಗಳನ್ನು ಹೇಳು 3
5. ಮಾತಿನಲ್ಲೂ, ನಡತೆಯಲ್ಲೂ ಎಂಥ ವಿನಯಶೀಲತೆ! 3
6. ಅನ್ಯಾಯವನ್ನು ಬೇಗ ಸರಿಪಡಿಸುವುದು ಆತನಿಗೆ ಶ್ರಮದಾಯಕವೇನಲ್ಲ 4
7. ವರ್ತಕರಿಗಿರುವ ಅನುಕೂಲಗಳು ಬಗೆ ಬಗೆ 4
8. ಮಾಲೀಕತ್ವದ ಬಗೆಗೆ ಆತನದು ಸತ್ವವಿಲ್ಲದ ನುಡಿ 4
9. ಮಧ್ಯಮ ವರ್ಗದವರಿಗೆ ಸೂಕ್ತವಾದ ಸುಂದರ ಮನೆ 4
11. ಕಾವಲು ನಿಲ್ಲುವ ಕೆಲಸ ಮಾಡುವುದೂ ದುಡಿಮೆಯೇ ತಾನೇ? 3
13. ಪಾಠ ಮಾಡುವ ಕ್ರಮ ಸರಿಯಿಲ್ಲ ಎಂದದ್ದಕ್ಕೆ ಭಾರೀ ಗದ್ದಲ 3
14. ಅಣ್ಣನೇ ಕರೆವಂತೆ ಕೇಳಿಸಿತು ಅವನ ಅನುಕರಣೆ 3
15. ಕಾಣುತ್ತಿಲ್ಲವೇ ಎಳ್ಳಿನದೇ ಆಕಾರದ ಹಣೆ ಬೊಟ್ಟು? 3

---

### 28-2-2019 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಆರಂಭಿಕ 3. ಸಮಗ್ರ 4. ಬಡಿಗೆ 6.ಹಣಕಾಸು 7. ಕೆಲಸಿಗ 9.ಧರಣಿಜ 12. ಪವನಜ 14. ಕಲಶ 15. ಪಾಮರ 16.ಯಥೋಚಿತ

ಮೇಲಿಂದ ಕೆಳಕ್ಕೆ:

1. ಆಗ್ರಹಿಸು 3. ಕಬಳಿಕೆ 3. ಸದ್ಗುಣ 5. ಗೆರಸಿ 6. ಹಲಾಯುಧ 8. ಗಜಬಜ (=ಗಜಿಬಿಜಿ) 10. ರಕ್ಷಕ 11. ಜಲಾಶಯ 12. ಪಕ್ಷಪಾತ 13. ನಶ್ವರ

ಪ್ರಶ್ನಾ ಂಕಣ

# ಎಲ್ಲಿದೆ ಧರೆಯ ತೃತೀಯ ಧ್ರುವ?

ಧರೆಯ ಎರಡು ಭೌಗೋಳಿಕ ಧ್ರುವಗಳು, ಎಂದರೆ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವ. ಎಲ್ಲರಿಗೂ ಪರಿಚಿತ ಹೌದಲ್ಲ? ಇವುಗಳಷ್ಟೇ ಮಹತ್ವದ್ದಾದ ಆದರೆ ಬಹು ಜನರಿಗೆ ಅಪರಿಚಿತವಾದ ಮತ್ತೂ ಒಂದು ಧ್ರುವ ಭೂಮಿಗೆ ಇದೆ. ಅದೇ ಧರೆಯ ತೃತೀಯ ಧ್ರುವ (ಥರ್ಡ್ ಪೋಲ್).

ನಿಮಗೇ ತಿಳಿದಿರುವಂತೆ ಧರೆಯ ಉತ್ತರ ಧ್ರುವ ಭೂಮಿಯ ಶಿರದಂತಿರುವ ಆರ್ಕ್ಟಿಕ್ ಪ್ರದೇಶದಲ್ಲಿದೆ (ಚಿತ್ರ 1) ದಕ್ಷಿಣ ಧ್ರುವ ಧರೆಯ ತಳದಂತಿರುವ ಅಂಟಾರ್ಕ್ಟಿಕಾ ಭೂಖಂಡದಲ್ಲಿದೆ (ಚಿತ್ರ 4). ಈ ಎರಡೂ ಧ್ರುವ ಪ್ರದೇಶಗಳು ಹಿಮಾಚ್ಛಾದಿತವಾಗಿವೆ, ಭಾರೀ ಪ್ರಮಾಣದ ಹಿಮ ಸಂಗ್ರಹವನ್ನು ಹೊಂದಿವೆ, ಅತ್ಯಂತ ಶೀತಲವಾಗಿವೆ, ಭೂ ಸ್ವಾಸ್ಥ್ಯದಲ್ಲಿ ನಿರ್ಣಾಯಕ ಪಾತ್ರವನ್ನೂ ಹೊಂದಿವೆ.

ಭೂಮಿಯ ಉತ್ತರ ಮತ್ತು ದಕ್ಷಿಣ ಧ್ರುವಗಳ ಲಕ್ಷಣಗಳನ್ನೇ ಹೊಂದಿರುವ, ಅವುಗಳಂಥದೇ ಮಹತ್ವವನ್ನೂ ಪಡೆದಿರುವ ಇನ್ನೂ ಒಂದು ಪ್ರದೇಶ ಇದೆ. ನಮ್ಮ ದೇಶದ ಉತ್ತರದಲ್ಲಿ, ಚೀನಾ ದೇಶದ ದಕ್ಷಿಣದಲ್ಲಿ, ಟಿಬೆಟನ್ ಪ್ರಸ್ಥಭೂಮಿಯನ್ನೂ ಒಳಗೊಂಡಿರುವ ಆ ಪ್ರದೇಶಕ್ಕೇ ಹಿಮಾಲಯ ಮತ್ತು ಹಿಂದೂಖುಶ್ ಪರ್ವತ ಪಂಕ್ತಿಗಳೂ ಸೇರಿವೆ (ಚಿತ್ರ 2 ಮತ್ತು ಚಿತ್ರ 3ರಲ್ಲಿ ಬಾಣದ ಗುರುತು ಸೂಚಿಸುತ್ತಿರುವ ಪ್ರದೇಶ). ಉತ್ತರ ಮತ್ತು ದಕ್ಷಿಣ ಧ್ರುವಗಳಂತೆಯೇ ಅಗಾಧ ಪ್ರಮಾಣದ ಶಾಶ್ವತ ಹಿಮಾಚ್ಛಾದಿತವಾದ ಆ ಪ್ರದೇಶಕ್ಕೆ, ಆ ಕಾರಣದಿಂದಲೇ 'ತೃತೀಯ ಧ್ರುವ' ಎಂಬ ಹೆಸರು.

ಧರೆಯ ತೃತೀಯ ಧ್ರುವದ ವೈಶಿಷ್ಟ್ಯಗಳು ಹಲವಾರಿವೆ. ಸುಮಾರು ಒಂದು ಲಕ್ಷ ಚದರ ಕಿಲೋ ಮೀಟರ್ ವಿಸ್ತಾರಕ್ಕೆ ಶಾಶ್ವತ ಹಿಮ ಶೇಖರವಾಗಿರುವ ಈ ಪ್ರದೇಶದಲ್ಲಿ 46,000 ಹಿಮನದಿಗಳಿವೆ. ಗೌರೀ ಶಂಕರವೂ ಸೇರಿದಂತೆ 8000 ಮೀಟರ್ (26,500 ಅಡಿ) ಔನ್ನತ್ಯ ಮೀರಿದ ಜಗತ್ತಿನ ಎಲ್ಲ ಹದಿನಾಲ್ಕು ಪರ್ವತ ಶಿಖರಗಳೂ ಇಲ್ಲೇ ನೆಲೆಗೊಂಡಿವೆ. ಗಂಗಾ, ಬ್ರಹ್ಮಪುತ್ರ, ಯಾಂಗ್ಸೇ, ಇರವಾಡೀ, ಮೇಕಾಂಗ್ ಇತ್ಯಾದಿ ಏಷಿಯಾ ಖಂಡದ ಹನ್ನೆರಡು ಪ್ರಧಾನ ನದಿಗಳು ಇಲ್ಲಿಂದಲೇ ಹುಟ್ಟಿ ಹರಿಯುತ್ತಿವೆ. ಏಷಿಯದ ಅತ್ಯಂತ ಸೂಕ್ಷ್ಮವಾದ ನಾಲ್ಕು ಅತ್ಯಮೂಲ್ಯ ಜೀವಿ ವೈವಿಧ್ಯ ತಾಣಗಳು ಈ ಪ್ರದೇಶದಲ್ಲೇ ಇವೆ.



ತೃತೀಯ ಧ್ರುವದ ಮತ್ತೂ ಮಹತ್ವ ಏನೆಂದರೆ, ಈ ಪ್ರದೇಶದಲ್ಲಿ ಅವತರಿಸಿ ಪ್ರವಹಿಸುತ್ತಿರುವ ನದಿಗಳ ನೀರು ಭಾರತವೂ ಸೇರಿದಂತೆ ಏಷಿಯದ ಹತ್ತಾರು ರಾಷ್ಟ್ರಗಳ ಒಟ್ಟು 130 ಕೋಟಿ ಜನರಿಗೆ ಕುಡಿಯಲು, ಕೃಷಿಗೆ, ಕೈಗಾರಿಕೆಗಳಿಗೆ ಮತ್ತು ವಿದ್ಯುತ್ ಉತ್ಪಾದನೆಗೆ ಆಕರವಾಗಿದೆ. ಈ ನದಿಗಳ ನೀರನ್ನು ಬಳಸಿ ಉತ್ಪಾದನೆಗೊಳ್ಳುತ್ತಿರುವ ಆಹಾರ ಮತ್ತು ವಿದ್ಯುತ್ ಶಕ್ತಿ ಜಗತ್ತಿನ ಸುಮಾರು ಮುನ್ನೂರು ಕೋಟಿ ಜನರಿಗೆ ಆಧಾರವಾಗಿವೆ!

ಇಷ್ಟೆಲ್ಲ ಮಹತ್ವ ಪಡೆದಿದ್ದರೂ, ಉತ್ತರ ಧ್ರುವ ಇರುವ ಆರ್ಕ್ಟಿಕ್ ಮತ್ತು ದಕ್ಷಿಣ ಧ್ರುವ ಇರುವ ಅಂಟಾರ್ಕ್ಟಿಕಾ ಪ್ರದೇಶಗಳಲ್ಲಿ ಆಗುತ್ತಿರುವಂತೆಯೇ ತೃತೀಯ ಧ್ರುವದ ಹಿಮ ಸಂಗ್ರಹವೂ ಭೂ ತಾಪ ಏರಿಕೆಯಿಂದಾಗಿ ಕರಗತೊಡಗಿದೆ; ಈ ಪ್ರದೇಶದಲ್ಲೂ ಪಾರಿಸರಿಕ ತಳಮಳ ತೀವ್ರಗೊಳ್ಳುತ್ತಿದೆ.

■ ಎನ್. ವಾಸುದೇವ್